# ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru. These lyrics are given separately in green highlights. There are more stanzas here.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. These lyrics are given separately without highlights.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao. These lyrics are given separately in yellow highlights.
4. **Note:** Singer has followed the lyrics as in Ref. 2.

| | |
|---|---|
| ರಾಗ: ಶಂಕರಾಭರಣ ತಾಳ: ಆದಿ | ರಾಗ: ಬೇಹಾಗ್ ತಾಳ: ಆದಿ |
| | |
| ಮಡಿ ಮಡಿ ಮಡಿಯೆಂದು ಅಡಿಗಡಿಗ್ ಹಾರುವೆ | ಮಡಿ ಮಡಿ ಮಡಿಯೆಂದು ಅಡಿಗಡಿಗ್ ಹಾರುತಿ |
| ಮಡಿ ಮಾಡುವ ಬಗೆ ಬೇರುಂಟು \|\| ಪ \|\| | ಮಡಿ ಮಾಡುವ ಬಗೆ ಬೇರುಂಟು |
| | |
| ಪೊಡವಿ ಪಾಲಕನ ಪಾದ ಧ್ಯಾನವನು | ಪೊಡವಿ ಪಾಲಕನ ಪಾದ ಧ್ಯಾನವನು |
| ಬಿಡದೆ ಮಾಡುವುದದು ಮಡಿಯು \|\| ಅಪ \|\| | ಬಿಡದೆ ಮಾಡುವುದು ಅದು ಮಡಿಯು |
| | |
| ಬಟ್ಟೆಯ ನೀರೊಳಗದ್ದಿ ಒಣಗಿಸಿ | ಬಟ್ಟೆಯ ನೀರೊಳಗದ್ದಿ ಒಣಗಿಸಿ |
| ಉಟ್ಟು ಕೊಂಡರೆ ಅದು ಮಡಿಯಲ್ಲ | ಉಟ್ಟು ಕೊಂಡರೆ ಅದು ಮಡಿಯಲ್ಲ |
| ಹೊಟ್ಟೆಯೊಳಗಿನ ಕಾಮ ಕ್ರೋಧ ಮದ ಮತ್ಸರ | ಹೊಟ್ಟೆಯೊಳಗಿನ ಕಾಮ ಕ್ರೋಧವ |
| ಬಿಟ್ಟು ನಡೆದರೆ ಅದು ಮಡಿಯು \|\| 1 \|\| | ಬಿಟ್ಟು ನಡೆದರೆ ಅದು ಮಡಿಯು |
| | |
| ದಶಮಿ ದ್ವಾದಶಿ ಪುಣ್ಯ ದಿನದಲಿ | ಇಚ್ಛೆಯಿಂದ ಮಲ ಮೂತ್ರ ಶರೀರವ |
| ವಸುದೇವ ಸುತನನು ಪೂಜಿಸದೆ | ನೆಚ್ಚಿ ತೊಳೆಯಲು ಅದು ಮಡಿಯೆ |
| ದೋಷಕಂಜದೆ ಪರರನ್ನ ಭುಂಜಿಸಿ ಯಮ- | ಅಚ್ಯುತಾನಂತನ ನಾಮವ ನೆನೆದು |
| ಪಾಶಕೆ ಸಿಲುಕುವುದದು ಮಡಿಯೆ \|\| 2 \|\| | ಸಂಚಿತ ಕಳೆವುದು ಅದು ಮಡಿಯು |
| | |
| ಹಸಿದು ಭೂಸುರರು ಮಧ್ಯಾಹ್ನ ಕಾಲಕೆ | ಹಸಿದು ಭೂಸುರರು ಮಧ್ಯಾಹ್ನ ಕಾಲದಿ |
| ಕುಸಿದು ಮನೆಗೆ ಬಳಲುತ ಬಂದರೆ | ಕುಸಿದು ಮನೆಗೆ ಬಳಲುತ ಬರಲು |
| ಮಸಣಿಗೊಂದು ಗತಿಯಿಲ್ಲವೆಂದು ತಾ | ಹುಸಿಯತನದಿ ಗತಿಯಿಲ್ಲವೆಂದು ತಾ |
| ಹಸನಾಗಿ ಉಂಬೋದು ಹೊಲೆ ಮಡಿಯು \|\| 3 \|\| | ಹಸನಾಗಿ ಉಂಬುವುದೆ ಹೊಲೆ ಮಡಿಯು |

ಇಚ್ಛೆಯಿಂದ ಮಲ ಮೂತ್ರ ಶರೀರವ
ನೆಚ್ಚಿ ತೊಳೆಯಲು ಅದು ಮಡಿಯೆ
ಅಚ್ಯುತಾನಂತನ ನಾಮವ ನೆನೆದು
ಸಂಚಿತ ಕಳೆವುದು ಅದು ಮಡಿಯು || 4 ||

ದಶಮಿ ದ್ವಾದಶಿ ಪುಣ್ಯ ಕಾಲದಲಿ
ವಸುದೇವ ಸುತನನು ಪೂಜಿಸದೆ
ದೋಷಕಂಜದೆ ಪರರನ್ನವ ಭುಂಜಿಸಿ ಯಮ-
ಪಾಶಕೆ ಬೀಳ್ವುದು ಅದು ಮಡಿಯೇ

ಹಿರಿಯರ ಗುರುಗಳ ಹರಿದಾಸರುಗಳ
ಚರಣಕೆರಗಿ ಬಲು ಭಕ್ತಿಯಲಿ
ಪರಿಪಾಲಿಸು ಎಂದು ಪುರಂದರ ವಿಠಲನ
ಇರುಳು ಹಗಲು ಸ್ಮರಿಸುವುದು ಮಡಿಯು || 5 ||

ಹಿರಿಯರ ಗುರುಗಳ ಹರಿದಾಸರುಗಳ
ಚರಣಕೆರಗಿ ಬಲು ಭಕ್ತಿಯಲಿ
ಪರಿಪಾಲಿಸು ಎಂದು ಪುರಂದರ ವಿಠಲನ
ಇರುಳು ಹಗಲು ನೆನೆವುದೆ ಮಡಿಯು

**Note:** As lyrics in book in Ref. 1 above are different, they are given separately here below in green highlights.

ರಾಗ: ಶಂಕರಾಭರಣ ತಾಳ: ಆದಿ

ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ
ಮಡಿ ಮಾಡುವ ಬಗೆ ಬೇರುಂಟು || ಪ ||

ಪೊಡವಿ ಪಾಲಕನ ಧ್ಯಾನ ಮಾಡುವುದು
ಬಿಡದೆ ಭಜಿಸುವುದು ಅದು ಮಡಿಯೊ || ಅಪ ||

ಬಟ್ಟೆಯ ನೀರೊಳಗಿಟ್ಟು ಒಣಗಿಸಿ
ಉಟ್ಟರೆ ಅದು ತಾ ಮಡಿಯಲ್ಲ
ಹೊಟ್ಟೆಯೊಳಗಿನ ಕಾಮ ಕ್ರೋಧಗಳ
ಬಿಟ್ಟರೆ ಅದು ತಾ ಮಾಡಿಯೊ || ೧ ||

ಪರ ಧನ ಪರ ಸತಿ ಪರ ನಿಂದೆಗಳನು
ಜರೆದಹಂಕಾರಗಳನೆ ತೊರೆದು
ಹರಿ ಹರಿ ಎಂದು ದೃಢದಿ ಮನದಲಿ
ಇರುಳು ಹಗಲು ಸ್ಮರಿಸಲು ಮಾಡಿಯೊ || ೨ ||

ಎಚ್ಚರವಿಲ್ಲದೆ ಮಲ ಮೂತ್ರ ದೇಹವ
ನೆಚ್ಚಿ ಕೆಡಲು ಬೇಡೆಲೊ ಮನವೇ
ಅಚ್ಯುತಾನಂತನ ನಾಮವ ಮನಗೊಂಡು
ಸಚ್ಚಿನ್ನೆಯಲಿರುವುದೆ ಮಡಿಯೊ || ೩ ||

ಭೂ ಸುರರು ಮಧ್ಯಾನ್ನ ಕಾಲದಲಿ
ಹಸಿದು ಬಳಲಿ ಬಂದರೆ ಮನೆಗೆ
ಬೇಸತ್ತು ನಮಗೆ ಗತಿಯಿಲ್ಲ ಹೋಗೆಂದು
ಹಸನಾಗಿ ಉಂಬುವುದು ಅದು ಮಡಿಯೆ ? || ೪ ||

ದಶಮಿ ದ್ವಾದಶಿಯ ಪುಣ್ಯ ಕಾಲದಲಿ
ವಸುದೇವ ಸುತನ ಪೂಜಿಸದೆ
ದೋಷಕಂಜದೆ ಪರರನ್ನ ಭುಜಿಸಿ ಯಮ
ಪಾಶಕೆ ಬೀಳ್ವುದು ಹುಸಿ ಮಡಿಯೆ ! || ೫ ||

ಸ್ನಾನ ಸಂಧ್ಯಾನ ಮೊದಲಾದ ಕರ್ಮಗಳೆಲ್ಲ
ಜ್ಞಾನ ಮಾನ ಸುಮ್ಮಾನದಿಂದ
ದೀನ ವಂದ್ಯನ ಸುಜನ ಸಂತರ್ಪಣ
ಅನುದಿನ ಮಾಡುವುದು ಘನ ಮಡಿಯೆ || ೬ ||

ಗುರು ಹಿರಿಯರ ಹರಿದಾಸರ ನೆನೆದು
ಚರಣಕೆರಗಿ ಭಯ ಭಕ್ತಿಯಿಂದ
ಪರಿ ಪರಿ ವಿಧದಲಿ ಪುರಂದರ ವಿಠ್ಠಲನ
ನೆರೆ ನಂಬುವುದು ಉತ್ತಮ ಮಡಿಯೆ || ೭ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಿಜವಾದ ಮಾಡಿ ಯಾವುದು? ಅಭಾಸದ ಮಾಡಿ ಯಾವುದು? ಎಂಬುದನ್ನು ದಾಸರು ಈ ಹಾಡಿನಲ್ಲಿ ಹೇಳಿದ್ದಾರೆ

**ಪೊಡವಿ ಪಾಲಕ** = ಶ್ರೀ ಹರಿ (ಭೂ ರಮಣ)

**ಮಾನ** = ಆದರ

**ಸುಮ್ಮಾನ** = ಸಂತೋಷ

**ಸಂಚಿತ** – ಕರ್ಮಗಳಲ್ಲಿ ಒಂದು ಬಗೆ; ಜನ್ಮಾಂತರಗಳಿಂದ ಅನುಸರಿಸಿ ಬಂದದ್ದು.

**ಪುಣ್ಯ ಕಾಲದಲಿ** – ಸಂಕ್ರಮಣ, ಗ್ರಹಣ ಇತ್ಯಾದಿ ಕಾಲಗಳಲ್ಲಿ.

**Classification:** Keerthane
**Ankita:** purandara vittala

**Location:** NA

**Category:** samsara chitragalu

**Sub-Category:** madi, karma, achyuta, Ananta, yama, punya, Krishna, hagalu, irulu, deha, patni, rokka, Dhyana, ahankara, oota, puje, snana, jnana, punya, anna, bhumi, sura, mane, smarane, dina, kaadu, vastra,

**Pravachana:** NA

**Explanation:** NA